RNU AIR DHARWAD

MAY 19, 2026

## AKASHAVANI - DHARWAD

## PRADESH SAMACHARA (KANNADA) 12.00 P.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಭಾರತದಲ್ಲಿ, ಗಿರಿಜನರ ಸಾಂಸ್ಕೃತಿಕ ಅಸ್ತಿತ್ವ** ಮತ್ತು ಸಮುದಾಯ ಚೇತನದ ಪ್ರತೀಕವಾಗಿದ್ದ, ಭಗವಾನ್ ಬಿರ್ಸಾ ಮುಂಡಾ ಅವರ, 150ನೇ ಜಯಂತ್ಯುತ್ಸವದ ಹಿನ್ನೆಲೆ, 24ನೇ ತಾರೀಖು, ಹೊಸ ದಿಲ್ಲಿಯ, ಕೆಂಪು ಕೋಟೆ ಆವರಣದಲ್ಲಿ, ಗಿರಿಜನರ ಸಾಂಸ್ಕೃತಿಕ ಸಮಾಗಮ ಆಯೋಜಿಸಲಾಗಿದೆ ಎಂದು, ವನವಾಸಿ ಕಲ್ಯಾಣದ ರಾಜ್ಯ ಕಾರ್ಯದರ್ಶಿ, ಶಾಂತಾರಾಮ ಸಿದ್ದಿ, ತಿಳಿಸಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಹೊಸ ದಿಲ್ಲಿಯಲ್ಲಿ ಅಂದು, ಐದು ವಿಭಿನ್ನ ಸ್ಥಳಗಳಿಂದ, ಶೋಭಾಯಾತ್ರೆ ನಡೆಯಲಿದೆ. 500 ಜಾತಿಗಳ, ಎರಡೂವರೆ ಲಕ್ಷ ವನವಾಸಿಗರು, ಗಿರಿಜನರ ಸಾಂಸ್ಕೃತಿಕ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ, ಎಂದರು. ಕರ್ನಾಟಕದಿಂದ, ಸಾವಿರದ 200 ಜನ ಹಾಗೂ ಧಾರವಾಡದಿಂದ, 48 ಜನ ಪ್ರತಿನಿಧಿಗಳು ಭಾಗವಹಿಸುತ್ತಿದ್ದಾರೆ.

<><><>

**ರಾಜ್ಯ ರಸ್ತೆ ಸಾರಿಗೆ** ನಿಗಮಗಳ ನೌಕರರು, ನಾಳೆಯಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ್ದಾರೆ. ಸಾರ್ವಜನಿಕರ ಸುಗಮ ಪ್ರಯಾಣಕ್ಕೆ, ರಾಜ್ಯದ ವಿವಿಧೆಡೆ ಅಡಚಣೆ ಉಂಟಾಗುವ ಸಾಧ್ಯತೆ ಇದೆ. ಈ ಹಿನ್ನೆಲೆ, ಮೈಸೂರು, ಧಾರವಾಡ ಸೇರಿದಂತೆ, ರಾಜ್ಯದ ಜಿಲ್ಲಾಡಳಿತಗಳು, ಸಾರ್ವಜನಿಕರ ಸುಗಮ ಪ್ರಯಾಣಕ್ಕೆ ತೊಂದರೆಯಾಗದಂತೆ, ಅಗತ್ಯ ಮತ್ತು ಪರ್ಯಾಯ ಸಿದ್ಧತೆಗಳನ್ನು, ಕೈಗೊಳ್ಳುತ್ತಿವೆ.

<><><>

**ಇಂಧನಗಳ ಹಿತಮಿತ ಬಳಕೆಗೆ,** ಪ್ರಧಾನಮಂತ್ರಿ ನರೇಂದ್ರ ಮೋದಿ ಕರೆ ಹಿನ್ನೆಲೆ, ವಿಜಯಪುರ ಸಂಸದ, ರಮೇಶ ಜಿಗಜಿಣಗಿ, ವಿದ್ಯುತ್ ಚಾಲಿತ ದ್ವಿಚಕ್ರ ವಾಹನದಲ್ಲಿ, ಜಿಲ್ಲಾಧಿಕಾರಿಗಳ ಕಚೇರಿಗೆ ಭೇಟಿ ನೀಡಿದರು.

<><><>

**ಧಾರವಾಡ ಜಿಲ್ಲೆ, ಹುಬ್ಬಳ್ಳಿಯ,** ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ವಿ 'ನ್ ಕರ್ನಾಟಕ ಫೌಂಡೇಶನ್ ಮತ್ತು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ, ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ – N.P.S.ಕುರಿತು, ನಾಳೆ ಸಂಜೆ 5 ಗಂಟೆಗೆ, ಸಂಸ್ಥೆ ಸಭಾಂಗಣದಲ್ಲಿ, ಮಾಹಿತಿ ಕಾರ್ಯಾಗಾರ ಆಯೋಜಿಸಿದೆ.

<><><>

**ವಿಜಯಪುರ ಜಿಲ್ಲೆಯಲ್ಲಿ,** 2030 ರೊಳಗೆ, 5 ಕೋಟಿ ಗಿಡಗಳನ್ನು ಬೆಳೆಸುವ ಗುರಿ ಹೊಂದಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ. 2016–17 ರಲ್ಲಿ, ಆರಂಭಿಸಲಾದ ಕೋಟಿ ವೃಕ್ಷ ಅಭಿಯಾನದ ಮೂಲಕ, ಜಿಲ್ಲೆಯಲ್ಲಿ ಈ ವರೆಗೆ, 1 ಕೋಟಿ 55 ಲಕ್ಷ 38 ಸಾವಿರ ಸಸಿಗಳನ್ನು ನೆಡಲಾಗಿದೆ.ಸಾಮಾಜಿಕ ಅರಣ್ಯೀಕರಣ ಯೋಜನೆ ಕುರಿತು, ವಿಜಯಪುರ ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ, ಮಲ್ಲಿನಾಥ ಕುಸನಾಳ, ಮಾಹಿತಿ ನೀಡಿದ್ದಾರೆ.

<><><>

**ಧಾರವಾಡ ಜಿಲ್ಲೆ, ಅಣ್ಣಿಗೇರಿ ತಾಲೂಕಿನ** ಸರ್ಕಾರಿ ಆಸ್ಪತ್ರೆಗೆ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ, ಡಾಕ್ಟರ್ ನಾಗಲಕ್ಷ್ಮಿ ಚೌಧರಿ ಭೇಟಿ ನೀಡಿ, ಪರಿಶೀಲಿಸಿದರು. ಆರೋಗ್ಯಾಕಾಂಕ್ಷಿಗಳನ್ನು ಭೇಟಿ ಮಾಡಿ, ಅಹವಾಲು ಆಲಿಸಿದರು.

<><><>

**ಕೊಪ್ಪಳ ತಾಲೂಕು, ಬಿ.**ಹೊಸಳ್ಳಿ, ಹ್ಯಾಟಿ ಹಾಗೂ ಮೆಳ್ಳಿಕೇರಿ ಗ್ರಾಮಗಳಲ್ಲಿ ಸುರಿದ ರಭಸದ ಮಳೆಗೆ, ಅಂದಾಜು 500 ಎಕರೆಗಳಷ್ಟು, ಬಾಳೆ ಬೆಳೆ ಹಾನಿಯಾಗಿದೆ ಎಂದು, ತೋಟಗಾರಿಕೆ ಇಲಾಖೆ, ಜಂಟಿ ನಿರ್ದೇಶಕ, ಕೃಷ್ಣ ಉಕ್ಕುಂದ, ತಿಳಿಸಿದ್ದಾರೆ. ಬೆಳೆ ಹಾನಿಯಾದ ಸ್ಥಳಗಳಿಗೆ, ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ, ವಿಧಾನ ಪರಿಷತ್ ಶಾಸಕಿ, ಹೇಮಲತಾ ನಾಯಕ, ತೆರಳಿ, ಬೆಳೆ ಹಾನಿ ಪರಿಶೀಲಿಸಿದರು.

<><><>

**ಪ್ರಧಾನಮಂತ್ರಿ, ಕಿರು ಆಹಾರ ಉದ್ಯಮಗಳ,** ಸಂಸ್ಕರಣಾ ಘಟಕಗಳ, ನಿಯಮಬದ್ಧ ಗೊಳಿಸುವಿಕೆ ಯೋಜನೆ, ಪಿ.ಎಂ. ಎಫ್.ಎಂ.ಇ. ಅಡಿ, ಗದಗ ಜಿಲ್ಲೆಯಾದ್ಯಂತ, ದ್ವಿದಳ ಧಾನ್ಯಗಳ ಮೌಲ್ಯವರ್ಧಿಸಿ, ಸಂಸ್ಕರಣಾ ಘಟಕಗಳನ್ನು ಪ್ರಾರಂಭಿಸಲು, ರೈತರು, ರೈತ ಉತ್ಪಾದಕರ ಸಂಸ್ಥೆಗಳು, ಕೃಷಿಕ ಮಹಿಳೆಯರ ಸ್ವಸಹಾಯ ಸಂಘಗಳಿಂದ, ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು, ಜೂನ್ 15 ಕೊನೆ ದಿನ ಎಂದು, ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ, ಚೇತನಾ ಪಾಟೀಲ, ತಿಳಿಸಿದ್ದಾರೆ.

<><><>

**ಕೊಡಗು ಜಿಲ್ಲೆ, ದುಬಾರೆ ಮತ್ತು ಬರಪೊಳೆಯಲ್ಲಿ,** ಜಲ ಸಾಹಸ ಕ್ರೀಡೆಗಳನ್ನು ನಡೆಸುವವರು, ಕಡ್ಡಾಯವಾಗಿ, ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯಿಂದ, ರಾಫ್ಟ್ ಫಿಟ್ನೆಸ್ ಪ್ರಮಾಣಪತ್ರ ಪಡೆಯುವುದನ್ನು ಕಡ್ಡಾಯಗೊಳಿಸಿ, ಅಪರ ಜಿಲ್ಲಾಧಿಕಾರಿ, ಡಾಕ್ಟರ್ ಸಹನಾ ಹಾದಿಮನಿ ಆದೇಶಿಸಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ,** ಜನಪ್ರಿಯ 'ಮನ್ ಕಿ ಬಾತ್'ನ 134ನೇ ಆವೃತ್ತಿ, ಈ ತಿಂಗಳ 31ರಂದು ಪ್ರಸಾರವಾಗಲಿದೆ. ನಾಗರಿಕರು ತಮ್ಮ ಅಭಿಪ್ರಾಯಗಳನ್ನು, ಈ ತಿಂಗಳ 29 ರೊಳಗೆ myGov.in ಜಾಲತಾಣ ಅಥವಾ 1800–11–7800 ಸಂಖ್ಯೆಗೆ ಕರೆ ಮಾಡಿ, ಹಂಚಿಕೊಳ್ಳಬಹುದು.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**<><><>**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**